**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.1480/2022**

**ಚಾ.ಸಾ. - 1**

**ಪ್ರಾ.ಸಾ. - 1**

**ಸಾಕ್ಷಿದಾರರ ಹೆಸರು** ಃ ಪ್ರವೀಣ ಮಹಂತೇಶ ಪಠಾತ

**ಸಾಕ್ಷಿದಾರರ ವಯಸ್ಸು** ಃ 24 ವರ್ಷ

**ಸಾಕ್ಷಿದಾರರ ಉದ್ಯೋಗ**ಃ ಖಾಸಗಿ ಕೆಲಸ

**ಸಾಕ್ಷಿದಾರರ ವಿಳಾಸ** ಃ ಗುಡಿಕಟ್ಟಿ

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 17-04-2023**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ**

ಮೃತ ಮಹಂತೇಶ ಇವರು ನನ್ನ ತಂದೆ. ದಿ॥8.3.2022 ರಂದು ರಾತ್ರಿ 10.00 ಗಂಟೆಗೆ ಚಾಸಾ- 7 ರವರು ನನಗೆ ಪೋನ ಮಾಡಿ ರಾತ್ರಿ 8.00 ಗಂಟೆ ಸುಮಾರಿಗೆ ಬೆಳವಡಿ ರಸ್ತೆಯಲ್ಲಿ ಖಂಡೋಜಿ ಅವರ ಹೊಲದ ಹತ್ತಿರ ಆರೋಪಿಯು ತಾನು ಚಲಾಯಿಸುತ್ತಿದ್ದ ಮೋಟರಸೈಕಲ ನಂ.ಕೆಎ 24 ಎಕ್ಸ 9158 ರ ಮೇಲೆ ನನ್ನ ತಂದೆಯನ್ನು ಕೂಡಿಸಿಕೊಂಡು ಬರುವಾಗ ಅಪಘಾತವಾಗಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ. ರಸ್ತೆಯ ಪಕ್ಕ ಇರುವ ಗೂಟಕಲ್ಲಿಗೆ ಹಾಯಿಸಿ ಅಪಘಾತವಾಗಿ ನಿಮ್ಮ ತಂದೆಗೆ ಭಾರಿ ಪೆಟ್ಟಾಗಿರುತ್ತದೆ ಕಾರಣ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ತಿಳಿಸಿರುತ್ತಾರೆ. ನಂತರ ಚಾಸಾ-7 ರವರು ನಮ್ಮ ತಂದೆಯನ್ನು ಬೆಳಗಾವಿ ಆಸ್ಪತ್ರೆಗೆ ಸೇರಿಕೆ ಮಾಡಿ ಸುದ್ದಿ ತಿಳಿದು ನಾವು ಬೆಂಗಳೂರಿನಿಂದ ಬೆಳಗಾವಿಗೆ ಬಂದಿರುತ್ತೇವೆ . ಅಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ನನ್ನ ತಂದೆಯನ್ನು ನೋಡಲಾಗಿ ಸದರಿಯವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆರೋಪಿಗೂ ಸಹಾ ಸಣ್ಣ ಪುಟ್ಟ ಪೆಟ್ಟಾಗಿದ್ದವು. ನಂತರ ನಮ್ಮ ತಂದೆಯನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ನಂತರ ನಾವು ದೊಡವಾಡ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಚಿಕಿತ್ಸೆ ಫಲಿಸದೇ ನನ್ನ ತಂದೆ ಮರಣಹೊಂದಿರುತ್ತಾರೆ. ಈ ಕುರಿತು ನಾನು ಪೊಲೀಸರಿಗೆ

ಮರುಹೇಳಿಕೆಯನ್ನು ನೀಡಿರುತ್ತೇನೆ. ಅಪಘಾತವು ಹೇಗೆ ಮತ್ತು ಯಾರ ತಪ್ಪಿ ನಿಂದ ಆಗಿರುತ್ತದೆ ಎಂದು ನನಗೆ ಗೊತ್ತಾಗಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಎಪಿಪಿ ಅವರಿಂದ**

ಸದರಿ ಅಪಘಾತವು ಆರೋಪಿಯು ಮೋಟರಸೈಕಲನ್ನು ಜೋರಾಗಿ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಎಡಬದಿಯಲ್ಲಿರುವ ಗೂಟಕಲ್ಲಿಗೆ ಹಾಯಿಸಿ ಅಪಘಾತ ಪಡಿಸಿರುತ್ತಾನೆ ಮತ್ತು ಸದರಿ ಅಪಘಾತವು ಆರೋಪಿಯ ತಪ್ಪಿ ನಿಂದ ಆಗಿರುತ್ತದೆ ಎಂದು ನನಗೆ ಚಾಸಾ-7 ರವರು ತಿಳಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ ಎಸ ಎಸ ವಕೀಲರಿಂದ**

ನಾನು ಬಿ ಎಸ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-1 ನ್ನು ನಾನೇ ಬರೆದಿರುತ್ತೇನೆ. ನಿಪಿ-1 ನ್ನು ಬರೆಯಲು ಚಾಸಾ-7 ರವರು ಮಾಹಿತಿ ನೀಡಿರುತ್ತಾರೆ. ನಿಪಿ-1 ನ್ನು ಚಾಸಾ-7 ರವರು ಹೇಳಿದ ರೀತಿಯಲ್ಲಿ ಬರೆದಿರುತ್ತೇನೆ ಎಂದರೆ ಸರಿ. ನಿಪಿ-1 ನ್ನು ಠಾಣೆಗೆ ಹೋಗಿ ನೀಡಿರುತ್ತೇನೆ. ನಿಪಿ-1 ರಂತೆ ದೂರನ್ನು ದಿಃ9.3.2022 ರಂದು ನೀಡಿರುತ್ತೇನೆ. ನಿಪಿ-1 ನ್ನು ಪೊಲೀಸರಿಗೆ ಬರೆದುಕೊಟ್ಟಾಗ ಸಂಜೆ 6.30 ಗಂಟೆ ಆಗಿತ್ತು. ಚಾಸಾ-7 ರವರು ಅಪಘಾತದ ಬಗ್ಗೆ ನನಗೆ ಫೋನ ಮಾಡಿ ರಾತ್ರಿ 9.30 ಗಂಟೆಯಿಂದ 10.00 ಗಂಟೆ ಒಳಗೆ ತಿಳಿಸಿರುತ್ತಾರೆ. ನಾವು ನೇರವಾಗಿ ಬೆಳಗಾವಿಗೆ ಬಂದು ಆಸ್ಪತ್ರೆಗೆ ಹೋಗಿರುತ್ತೇವೆ.

ಆರೋಪಿ ಪರ ವಕೀಲರು ಮಧ್ಯಾಹ್ನ 3.00 ಗಂಟೆಗೆ ಪಾಟೀ ಸವಾಲೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**